**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/169/ಇಸಿಎಸ್(3)/2017

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 31.01.2018.

**ಜ್ಞಾಪನ**

ವಿಷಯ : ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಪಾಲಿಟೆಕ್ನಿಕ್‌ಗಳಲ್ಲಿ ನಡೆಸುವ ಪ್ರೋಗ್ರಾಮ್‌ಗಳಿಗೆ 2017-18 ನೇ ಸಾಲಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 430 ಟಿಪಿಇ 97, ದಿನಾಂಕ: 04.12.1998.
2. ಸರ್ಕಾರಿ ಆದೇಶ ಸಂಖ್ಯೆ: ED 39 egov 2015, ದಿನಾಂಕ: 31.03.2016.

*-*-*-*-*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ಉಲ್ಲೇಖದಲ್ಲಿ ತಿಳಿಸಿರುವ ಸರ್ಕಾರಿ ಆದೇಶಗಳನ್ವಯ 2017-18 ರ ಸಾಲಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯಬೇಕಾಗಿರುತ್ತದೆ. ಪಾಲಿಟೆಕ್ನಿಕ್‌ಗಳು ಸಂಯೋಜನೆ ಪಡೆಯಲು ನಿಗದಿತ ಸಂಯೋಜನೆ ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಲೆಕ್ಕ ಶೀರ್ಷಿಕೆ 0202-02-101-0-06 "ಅಫಿಲಿಯೇಷನ್ ಫೀ ಫಾರ್ ಟೆಕ್ನಿಕ್‌ಲ್ ಎಜುಕೇಷನ್"ಯಡಿ **ದಿನಾಂಕ: 17.02.2017 ರೊಳಗೆ** ಸರ್ಕಾರಿ ಖಜಾನೆಗೆ ಜಮಾ ಮಾಡುವುದು. ಈ ಸಂಬಂಧ ಸರ್ಕಾರಿ ಖಜಾನೆಗೆ ಜಮಾ ಮಾಡಬೇಕಾದ ಶುಲ್ಕದ ವಿವರ ಈ ಕೆಳಕಂಡಂತಿದೆ.

| | | | |
|---|---|---|---|
| 1. | ಈಗಾಗಲೇ ನಡೆಸುತ್ತಿರುವ ಪ್ರತಿ ಪ್ರೋಗ್ರಾಮ್‌ಗಳಿಗೆ | - | ರೂ.2000/- |
| 2. | ಈಗಾಗಲೇ ನಡೆಸುತ್ತಿದ್ದು 2017-18 ನೇ ಸಾಲಿನಲ್ಲಿ ಪ್ರವೇಶ ಸಂಖ್ಯೆ ಹೆಚ್ಚಿಸಿರುವ ಪ್ರತಿ ಪ್ರೋಗ್ರಾಮ್‌ಗೆ | - | ರೂ.2000/- |
| 3. | 2017-18ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಪ್ರತಿ ಪ್ರೋಗ್ರಾಮ್‌ಗಳಿಗೆ | - | ರೂ.10,000/- |
| 4. | 2017-18 ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ಪಾಲಿಟೆಕ್ನಿಕ್‌ಗಳಿಗೆ ಮತ್ತು ಸದರಿ ಹೊಸ ಪಾಲಿಟೆಕ್ನಿಕ್‌ಗಳಲ್ಲಿ ಪ್ರಾರಂಭ ಮಾಡಿರುವ ಪ್ರತಿ ಹೊಸ ಪ್ರೋಗ್ರಾಮ್‌ಗೆ ಕ್ರಮವಾಗಿ | - | ರೂ 20,000/- ಮತ್ತು ರೂ 10,000/- |

2017-18 ನೇ ಸಾಲಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯಲು ಆನ್‌ಲೈನ್ ಅರ್ಜಿ ನಮೂನೆಯ ತಂತ್ರಾಂಶವನ್ನು ಪ್ರಸ್ತುತ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಅಭಿವೃದ್ಧಿಪಡಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಸಂಯೋಜನೆಗೆ ಸಂಬಂಧಿಸಿದಂತಹ ಎಲ್ಲಾ ವಿವರಗಳನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಲು ತಿಳಿಸಲಾಗುವುದು.

ಮುಂದುವರೆದು 2017-18 ರ ಶೈಕ್ಷಣಿಕ ವರ್ಷದ ಸಂಯೋಜನೆಗೆ ಸಂಬಂಧಿಸಿದಂತೆ ಸಂಯೋಜನಾ ಶುಲ್ಕವನ್ನು ಸರ್ಕಾರಿ ಖಜಾನೆಗೆ ಜಮಾ ಮಾಡಿ, ಜಮಾ ಮಾಡಿದ ಮೂಲ ರಸೀದಿಯನ್ನು ತಮ್ಮ ಸಂಸ್ಥೆಯಲ್ಲಿಯೇ ಇಡುವುದು ಹಾಗೂ ಅದರ ಜೆರಾಕ್ಸ್ ಪ್ರತಿಯೊಂದಿಗೆ 2017-18 ನೇ ಸಾಲಿಗೆ ಎ.ಐ.ಸಿ.ಟಿ.ಇ, ನವದೆಹಲಿ ಇವರಿಂದ ನೀಡಲಾದ ಅನುಮೋದನೆ ಪತ್ರದ ಜೆರಾಕ್ಸ್ ಪ್ರತಿ ಮತ್ತು ರಾಜ್ಯ ಸರ್ಕಾರದಿಂದ ಅನುಮೋದಿಸಲ್ಪಟ್ಟ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿ ತಾಂತ್ರಿಕ ಪರೀಕ್ಷಾ ಮಂಡಳಿಗೆ ಸಲ್ಲಿಸಬೇಕಾಗಿ ಸೂಚಿಸಲಾಗಿದೆ.

ಯಾವುದೇ ಕಾರಣಕ್ಕೂ ಸಂಯೋಜನಾ ಶುಲ್ಕವನ್ನು ಸರ್ಕಾರಿ ಖಜಾನೆಗೆ ಜಮಾ ಮಾಡುವ ದಿನಾಂಕವನ್ನು ಮುಂದೂಡಲಾಗುವುದಿಲ್ಲ. ಪ್ರಯುಕ್ತ ಈ ವಿಷಯದಲ್ಲಿ ವಿಶೇಷ ಗಮನ ಹರಿಸಲು ತಿಳಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಸೂಚನೆ : ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳು ಸಂಯೋಜನಾ ಶುಲ್ಕದಿಂದ ವಿನಾಯಿತಿ ಹೊಂದಿದ್ದು, ಸಂಯೋಜನೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಬೇಕಾಗಿರುತ್ತದೆ.

ಇವರಿಗೆ: ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ

ಪ್ರತಿ:
1. ಸಹ ನಿದೇಶಕರು (ಪರೀಕ್ಷೆ)
2. ಸಹ ನಿರ್ದೇಶಕರು (ಎ.ಟಿ.ಎಸ್)
3. ಉಪ ನಿರ್ದೇಶಕರು (ಪರೀಕ್ಷೆ)
4. ಸಹಾಯಕ ನಿರ್ದೇಶಕರು (ಪರೀಕ್ಷೆ(1) ಮತ್ತು (2))
5. ನಿರ್ದೇಶಕರ ಆಪ್ತ ಶಾಖೆಗೆ - ಮಾಹಿತಿಗಾಗಿ
6. ಪರೀಕ್ಷೆ ಇ.ಸಿ.ಎಸ್(2) ವಿಭಾಗಕ್ಕೆ